# ಯಜ್ಞದ ಕುರಿಯಾದಾತನು

✍ ಸಂಗ್ರಹ ಸುನಯನ ವಾಲ್ಟರ್ಸ್

**ಯ**ಾಜಕಕಾಂಡದಲ್ಲಿ ಇಸ್ರಾಯೇಲ್ಯರ ಪಾಪಪರಿಹಾರ ಮತ್ತು ಬಿಡುಗಡೆಗಾಗಿ ನಿಯಮಗಳು ಸಂಪೂರ್ಣವಾಗಿ ವಿವರಿಸಲ್ಪಟ್ಟಿವೆ. ಇದಲ್ಲದೆ 27ನೇ ಅಧ್ಯಾಯದಲ್ಲಿ ಕೇವಲ ಹರಕೆ ಮಾಡಿಕೊಡಲ್ಪಟ್ಟ ಹರಕೆಯ ಪಶು, ಆಸ್ತಿ ಮತ್ತು ಮನುಷ್ಯ – ಇವುಗಳ ಕುರಿತು ವಚನ 28, 29ರಲ್ಲಿ ವಿವರಿಸಲ್ಪಟ್ಟಿದೆ. ಇಂಥವುಗಳನ್ನು ಮಾರಲಿಕ್ಕಾಗಿಯೇ ಬಿಡುಗಡೆ ಮಾಡಿಕೊಳ್ಳುವುದಕ್ಕಾಗಲಿ ಯಾವುದೇ ಅಧಿಕಾರವಿರಲಿಲ್ಲ – **"ಕೇವಲ ಯೆಹೋವನ ಸೊತ್ತಾಗುವುದಕ್ಕೆ ಒಪ್ಪಿಸಲ್ಪಟ್ಟದ್ದು ಮನುಷ್ಯ ಜಾತಿಯಾದರೆ ಬಿಡಿಸುವುದಕ್ಕಾಗದು; ಅವನಿಗೆ ಮರಣವೇ ಆಗಬೇಕು"** (ವಚನ 29). ಅಲ್ಲದೆ ಅರಣ್ಯಕಾಂಡ 3:11, 12ರಲ್ಲಿ ಯೆಹೋವನು ಮೋಶೆಗೆ – **"ಇಸ್ರಾಯೇಲ್ಯರಲ್ಲಿರುವ ಚೊಚ್ಚಲಾದ ಮನುಷ್ಯರನ್ನೂ ಪಶುಗಳನ್ನೂ ನನ್ನ ಸ್ವಂತಕ್ಕಾಗಿ ಪ್ರತಿಷ್ಠಿಸಿಕೊಂಡೆನಲ್ಲಾ; ಅವರು ನನ್ನವರೇ; ನಾನು ಯೆಹೋವನು"** ಎಂದು ಹೇಳಿದ್ದಿದೆ.

ಯೇಸು ಸ್ವಾಮಿಯು ದೇವರ ಒಬ್ಬನೇ ಮಗನು; ಲೌಕಿಕವಾಗಿಯೂ ಪ್ರಥಮಫಲವಾಗಿದ್ದಾತನು. ಅಲ್ಲದೆ ಆತನ ಕುರಿತು "ಯಜ್ಞದ ಕುರಿಯಾದಾತನು" ಎಂದೂ ಹೇಳಲಾಗಿದೆ.

ಬೇರೆ ಬೇರೆ ಜನಾಂಗಗಳಲ್ಲಿ ನಾನಾ ರೀತಿಯ ಪ್ರಾಯಶ್ಚಿತ್ತ ಬಲಿಗಳು ಹಿಂದಿನ ಕಾಲದಲ್ಲಿ ಆಚರಣೆಯಲ್ಲಿತ್ತು. ಈಗ ಅದು ಅಪರಾಧವೆಂದು ಎಣಿಸಲ್ಪಟ್ಟರೂ ಕೆಲವೆಡೆ ಇನ್ನೂ ಗುಪ್ತವಾಗಿ, ಬಹಿರಂಗವಾಗಿ ಕಂಡುಬರುತ್ತದೆ. ಶಾಸ್ತ್ರೋಕ್ತವಾಗಿ ಪ್ರಾಣಿ ಬಲಿ / ಪುರುಷ ಬಲಿಗಳಿಗೆ ಸಾಮಾನ್ಯವಾಗಿ ಹತ್ತು ನಿಯಮಗಳಿವೆಯೆಂದು ಹೇಳಲಾಗಿದೆ.

**1. ಅದು (ಪುರುಷನು) ಪೂರ್ಣಾಂಗವಾಗಿರಬೇಕು.**

ಎಂದರೆ ನಿಷ್ಕಲಂಕವಾಗಿರಬೇಕು. ಯಾಜಕಕಾಂಡ 22:20 **ಹರಕೆಯಾಗಿ ಅಥವಾ ಕಾಣಿಕೆಯಾಗಿ ಯೆಹೋವನಿಗೆ ಸರ್ವಾಂಗಹೋಮ ಮಾಡುವಾಗ... ಕುಂದು ಕೊರತೆ ಇರುವಂಥದ್ದನ್ನು ತರಬಾರದು; ಅಂಥದು ಸಮರ್ಪಕವಾಗಿರುವುದಿಲ್ಲ"** ಅಲ್ಲದೆ ಯಾಜಕ ಕಾಂಡ 3:1ರಲ್ಲಿ ಹೇಳಿದಂತೆ **"ಅದು ಪೂರ್ಣಾಂಗವಾಗಿಯೇ ಇರಬೇಕು"**.

ಯೇಸುಸ್ವಾಮಿಯು ನಿಷ್ಕಳಂಕನಾಗಿದ್ದನು. **ಆತನಲ್ಲಿ ಪಾಪವಿರಲಿಲ್ಲ!** (1 ಯೋಹಾನ 3:5).

**2. ಅದು(ಪುರುಷನು) ಪ್ರತ್ಯೇಕಿಸಲ್ಪಡಬೇಕು.**

ಅನ್ಯ ಶಾಸ್ತ್ರಗಳ ಪ್ರಕಾರ ಕುದುರೆಯನ್ನು ಯಜ್ಞಮಾಡುವಾಗ, ಅದನ್ನು ಬೇರೆ ಪ್ರಾಣಿಗಳಿಂದ ಪ್ರತ್ಯೇಕಿಸಲಾಗುತ್ತಿತ್ತು. ಅದನ್ನು ಜನರಿಗೆ ತಿಳಿಸುವುದಕ್ಕಾಗಿ ಅದರ ತಲೆಯ ಮೇಲೆ ಮುಳ್ಳಿನ ಗಿಡದ ಒಂದು ರಚನೆಯನ್ನು ಅದರ ತಲೆಯ ಮೇಲಿಡಲಾಗುತ್ತಿತ್ತು.

**"ಸಿಪಾಯಿಗಳು ಮುಳ್ಳುಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿದರು"** (ಯೋಹಾನ 19:1) – ಹೀಗೆ ಆತನನ್ನು ಪ್ರತ್ಯೇಕಿಸಿದರು.

**3. ಅದು / ಆತನು ತನ್ನವರಿಂದ ನಿರಾಕರಿಸಲ್ಪಡಬೇಕು.**

– ಎಂದರೆ ಆತನ ಒಡಹುಟ್ಟಿದವರು, ತಂದೆತಾಯಿಯರು, ಬಂಧು–ಬಳಗ ಎಲ್ಲರಿಂದ ನಿರಾಕರಿಸಲ್ಪಡಬೇಕು.

ಯೆಶಾಯನ ಪ್ರವಾದನೆಯಲ್ಲಿ ಹೇಳಿದಂತೆ ಆತನು ನಿಂದಿಸಲ್ಪಟ್ಟನು, ತಿರಸ್ಕರಿಸಲ್ಪಟ್ಟನು. ಅಲ್ಲದೆ ಆತನ ಸ್ವಂತ ಜನರೇ "ಆತನನ್ನು ಶಿಲುಬೆಗೇರಿಸು, ಶಿಲುಬೆಗೇರಿಸು" ಎಂದು ಆರ್ಭಟಿಸಿದರು. ಇಷ್ಟೇ ಅಲ್ಲದೆ ಆತನ ತಂದೆಯಾದ ದೇವರು ಕೂಡಾ ತನ್ನ ಕೈಬಿಟ್ಟಿದ್ದಾನೆ ಎಂದು ಆ ಘಳಿಗೆಯಲ್ಲಿ

ದೇವಕುಮಾರನಾದ. ಆತನಿಗೆ ಅನುಭವವಾಯಿತು.

**"ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟದ್ದೀ" ಎಂದು ಯೇಸು ಮಹಾಧ್ವನಿಯಿಂದ ಕೂಗಿದನು** (ಮತ್ತಾಯ 27:46).

**4. ಅದು/ಆತನು ಮೌನವಾಗಿ ಸಂಕಟವನ್ನು ಅನುಭವಿಸಬೇಕು.**

ಕ್ರೂಜೆಗೇರಿಸಲ್ಪಡುವ ಮೊದಲು ನಡೆದ ನ್ಯಾಯವಿಚಾರಣೆಗಳ ಸಮಯದಲ್ಲಿ ಯೇಸುವು ತನ್ನ ಸಮರ್ಥನೆಗಾಗಿ ಪ್ರಯತ್ನಿಸಲಿಲ್ಲ. ಒಂದೆರಡು ಸಂದರ್ಭದಲ್ಲಿ ನುಡಿದ ಸಾಕ್ಷಿಮಾತುಗಳಿಗೆ ಮಾತ್ರ ಆತನು ಬಾಯಿತೆರೆದನು. ಉಳಿದ ಸಮಯದಲ್ಲಿ ಬಾಯಿ ತೆರೆಯಲಿಲ್ಲ. ತಾನು ಹೀನೈಸಲ್ಪಟ್ಟಾಗಲೂ, ಹಿಂಸಿಸಲ್ಪಟ್ಟಾಗಲೂ, ಚರ್ಮ ಬಿರಿದು, ಮಾಂಸ ಕಿತ್ತುಬರುವ ಕೊರಡೆ ಏಟು ಬಿದ್ದಾಗಲೂ ಆತನು ಮೌನವಾಗಿಯೇ ಸಹಿಸಿಕೊಂಡನು. ವಧ್ಯಸ್ಥಾನಕ್ಕೊಯ್ಯಲ್ಪಡುವ ಕುರಿಯಂತೆ ಸಹಿಸಿಕೊಂಡನು.

**5. ಅದು/ಆತನು ಕಂಬಕ್ಕೆ ಬಂಧಿಸಲ್ಪಡಬೇಕು.**

"Bind the sacrifice with cords to the horns of the altar" (ಕೀರ್ತನೆ 118:27 – King James Version). ಕ್ರಿಸ್ತನನ್ನು ಮರಣದಂಡನೆಗಾಗಿ ಕ್ರೂಜೆಗೆ ಬಂಧಿಸಲಾಯಿತು.

**6. ಆತನ / ಅದರ ರಕ್ತವು ಸುರಿಯಬೇಕು.**

**"ಕ್ರಿಸ್ತನು ಮಹಾಯಾಜಕನಾಗಿ ಬಂದು ಸೃಷ್ಟಿಗೆ ಸಂಬಂಧ ಪಡದಂಥಹ ಗುಡಾರದಲ್ಲಿ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರವಾಗಿ ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು"** (ಇಬ್ರಿಯ 9:11–14).

ಯೇಸುವಿನ ರಕ್ತವು ಧಾರಾಳವಾಗಿ ಸುರಿಸಲ್ಪಟ್ಟಿತು. ಜೀವವಿರುವಾಗಲೂ – ಕೊರಡೆ ಏಟಿನ ಕಾರಣ, ಮುಳ್ಳಿನ ಕಿರೀಟದಿಂದಾಗಿ, ಮೊಳೆಗಳ ಬಡಿಯುವಿಕೆಯಿಂದಾಗಿ ಮತ್ತು ಪ್ರಾಣ ಹೋದ ಮೇಲೂ ಪಕ್ಕೆಯಲ್ಲಿ ಇರಿಯಲ್ಪಟ್ಟ ಭರ್ಜಿಯ ಗಾಯದಿಂದ ಆ ಅದ್ಭುತವಾದ ಬಿಡುಗಡೆಯ ರಕ್ತವೂ ನೀರೂ ಹರಿಯಿತೆಂದು ವೇದವಾಕ್ಯದಲ್ಲಿ ಹೇಳಲಾಗಿದೆ.

**ರಕ್ತಧಾರೆ ಇಲ್ಲದೆ ಪಾಪಪರಿಹಾರ ಉಂಟಾಗುವುದಿಲ್ಲ** (ಇಬ್ರಿಯ 9:22).

**7. ಅದರ / ಆತನ ಎಲುಬುಗಳನ್ನು ಮುರಿಯಬಾರದು.**

ವಿಮೋಚನಕಾಂಡ 12:46ರಲ್ಲಿ ಪಸ್ಕದ ಕುರಿಯ ಕುರಿತು ಹೇಳಿಒದ ಮಾತು – **"ಆ ಪಶುವಿನ ಒಂದು ಎಲುಬನ್ನಾದರೂ ಮುರಿಯಬಾರದು."** ಯೇಸುವಿನ ಮರಣಾನಂತರ **"ಸಿಪಾಯಿಗಳು ಬಂದು ಮೊದಲನೆಯವನ ಕಾಲುಗಳನ್ನೂ ಅವನ ಜೊತೆ ಶಿಲುಬೆಗೆ ಹಾಕಿಸಿಕೊಂಡಿದ್ದ ಮತ್ತೊಬ್ಬನ ಕಾಲುಗಳನ್ನೂ ಮುರಿದರು. ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವುದನ್ನು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ"** (ಯೊಹಾನ 19:33).

**"ಆತನ ಒಂದು ಎಲುಬನ್ನಾದರೂ ಮುರಿಯ ಕೂಡದು"** ಎಂದು ಶಾಸ್ತ್ರದಲ್ಲಿ ಬರೆದ ಮಾತು ನೆರವೇರುವಂತೆ ಇದಾಯಿತು (ಯೊಹಾನ 19:36).

**8. ಯಜ್ಞಪುರುಷನು ತಿರಿಗಿ ಜೀವಿತನಾಗಬೇಕು.**

ಒಂದು ಅನ್ಯ ಶಾಸ್ತ್ರೋಕ್ತಿಯಂತೆ – "ಒಂದು ಮರವನ್ನು ಕಡಿದರೆ ಅದು ಬೇರಿನಿಂದ ಚಿಗುರುತ್ತದೆ. ಆದರೆ ಮನುಷ್ಯನೊಬ್ಬನನ್ನು ಕಡಿದು ಕೊಂದರೆ, ಯಾವ ಬೇರಿನಿಂದ ಅವನು ತಿರಿಗಿ ಬರಬೇಕು? ಆದರೆ ಈ ಪುರುಷನು ತನ್ನಿಂದ ತಾನೇ ಜೀವಿತನಾಗಿ ಬರುವನು."

**"ಆತನನ್ನು ಮರದ ಕಂಬಕ್ಕೆ ತೂಗಹಾಕಿ ಕೊಂದರು. ದೇವರು ಆತನನ್ನು ಮೂರನೆಯ ದಿನದಲ್ಲಿ ಎಬ್ಬಿಸಿ ಪ್ರತ್ಯಕ್ಷನಾಗುವಂತೆ ಮಾಡಿದನು** (ಅ.ಕೃ. 10:40).

**"ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ**

ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು (1 ಕೊರಿಂಥ 15:20).

9. ಅದರ / ಆತನ ಮಾಂಸವನ್ನು ಸಂತರು ಭುಜಿಸಬೇಕು 'ಇದರಿಂದ ಆ ಬಲಿಯು ಅವರದಾಗುತ್ತದೆ ಮತ್ತು ಬಲಿಯು ದೇವರ ಆಹಾರವಾಗಿದೆ.

ಯೋಹಾನ 6:53–56ರಲ್ಲಿ ಯೇಸುವು ತನ್ನ ಬೋಧನೆಯಲ್ಲಿ ಹೇಳಿದ್ದು – **"ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ. ನನ್ನ ಮಾಂಸವನ್ನು ತಿಂದು ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ. ಯಾಕೆಂದರೆ ನನ್ನ ಮಾಂಸವೇ ನಿಜವಾದ ಆಹಾರ, ನನ್ನ ರಕ್ತವೇ ನಿಜವಾದ ಪಾನ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ಇರುತ್ತಾನೆ; ನಾನು ಅವನಲ್ಲಿ ಇರುತ್ತೇನೆ."**

ತನ್ನ ಶಿಷ್ಯರ ಸಂಗಡ ಕಡೇ ಭೋಜನ ಮಾಡುವಾಗ ಯೇಸುವು ರೊಟ್ಟಿ, ದ್ರಾಕ್ಷಾರಸಗಳನ್ನು, ದೇವರ ಸ್ತೋತ್ರ ಪೂರ್ವಕವಾಗಿ ಶಿಷ್ಯರಿಗೆ ಕೊಟ್ಟು **– ಇದನ್ನು ತಿನ್ನಿರಿ, ಕುಡಿಯಿರಿ – ಇದು ನನ್ನ ದೇಹ, ಇದು ನನ್ನ ರಕ್ತ ಎಂದು ಅವರಿಗೆ ಕೊಟ್ಟನು** (ಮತ್ತಾಯ 26:26–27) ಎಂದು ಸತ್ಯವೇದದಲ್ಲಿ ಬರೆದಿದೆ. ಇದನ್ನು ಸಾಂಕೇತಿಕವಾಗಿ ಕರ್ತನ ರಾತ್ರಿ ಭೋಜನದ ಮೂಲಕ ಪಶ್ಚಾತ್ತಾಪದ ಮೂಲಕವಾದ ಪಾಪಪರಿಹಾರಕ್ಕಾಗಿ ನಾವು ಈಗಲೂ ಮಾಡುತ್ತೇವೆ.

**10. ಪುರುಷ ಬಲಿಯು ಸರ್ವರ ಕಲ್ಯಾಣಕ್ಕಾಗಿ ಇರಬೇಕು.**

ಆ ಯಜ್ಞಕ್ಕಾಗಿ ಆತನು ತನ್ನಲ್ಲಿದ್ದ ಎಲ್ಲವನ್ನೂ ಅರ್ಪಿಸಿದನು. ಯೇಸುಸ್ವಾಮಿಯು ಎಲ್ಲರಿಗಾಗಿ ಬಲಿಯಾದನು. **"ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೆ?"** (ರೋಮಾ 8:32).

ನಾವು ಇನ್ನೂ ಯಾತಕ್ಕಾಗಿ ಕಾಯುತ್ತಿದ್ದೇವೆ? ■

## ಇಲ್ಲಿಯವರೆಗೆ ಉಸಿರು ಬಿಗಿ ಹಿಡಿದಿದ್ದೆವು.... ಆದರೆ

ನಾವು ನಮ್ಮ ಜಿಲ್ಲಾಧಿಕಾರಿಯವರ ಮೂಲಕ ದೆಹಲಿಯ Dept. of News Paper India - Ministry of Broadcrasting and Informationಗೆ RNIನ ಪರ್ಮನೆಂಟ್ ಲೈಸನ್ಸ್‌ಗಾಗಿ ಅರ್ಜಿ ಸಲ್ಲಿಸಿದೆವು. 2005ರಲ್ಲಿ ನಮಗೆ ತಾತ್ಕಾಲಿಕ RNI ನಂಬರ್ ಸಿಕ್ಕಿದ್ದು ಅದರ ಅವಧಿ ಮುಗಿದು 2011 ಆಗಸ್ಟ್‌ನಲ್ಲಿ ಅರ್ಜಿ ಸಲ್ಲಿಸಿ, ಅದು ಅಸಿಸ್ಟೆಂಟ್ ಕಮಿಷನರ್ ಹಾಗೂ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್‌ಗೆ ಹೋಗಿ ಅಲ್ಲಿಂದ ಪೋಲಿಸ್ ವಿಚಾರಣೆ ಹಾಗೂ ಕಂದಾಯ ಇಲಾಖೆಯ ರೆವೆನ್ಯೂವ್ ಇನ್ಸ್‌ಪೆಕ್ಟರ್‌ರಿಂದ ಹಾಗೂ ಗ್ರಾಮ ಲೆಕ್ಕಿಗರಿಂದ ಮಾಹಿತಿ ವಿಚಾರಣೆ ಪಡೆದು 19–12–2011ರಲ್ಲಿ ಅಂದರೆ ನಾಲ್ಕು ತಿಂಗಳ ತರುವಾಯ ದೆಹಲಿಗೆ ರವಾನಿಸಲ್ಪಟ್ಟು, ನಾವು ದೆಹಲಿ ಕಛೇರಿಗೆ ಸತತವಾಗಿ ವಾರಕ್ಕೊಮ್ಮೆ ವಿಚಾರಿಸಿದಾಗ್ಯೂ ಇನ್ನೂ ಕೈ ಸೇರಲಿಲ್ಲ.

ನಮಗೆ ಅಂಚೆ ಇಲಾಖೆಯಿಂದ ಅಂಚೆ ವೆಚ್ಚ ರಿಯಾಯಿತಿ ಸಿಕ್ಕಿದ್ದು ಅದೂ ಈಗ ರದ್ದಾಗಿ ಈ ತಿಂಗಳಿನಿಂದ ರೂ. 4/–ರ ಸ್ಟ್ಯಾಂಪ್ ಹಾಕುತ್ತಾ ಇದ್ದೇವೆ. 32 ಪುಟಗಳ 50ಗ್ರಾಂ. ತೂಕದ ಒಳಗೆ ಇದ್ದರೆ ರೂ. 4 ಇಲ್ಲವಾದರೆ ರೂ. 8 ಸ್ಟ್ಯಾಂಪ್ ಹಾಕಬೇಕಿದೆ. ಆದ್ದರಿಂದ ಪುಟಗಳನ್ನು ಕಮ್ಮಿ ಮಾಡಿ ಕಳುಹಿಸುತ್ತಾ ಇದ್ದೇವೆ.

ಇದುವರೆಗೂ ಇಂದು, ನಾಳೆ ಬರುತ್ತದೆ ಎಂದು ಉಸಿರು ಬಿಗಿಹಿಡಿದು ಕಾದೆವು.

ನಿಮ್ಮ ಪ್ರಾರ್ಥನೆ ಹಾಗೂ ನಮ್ಮ ನಂಬಿಕೆ ಸಾಕಾಗಲಿಲ್ಲವೇನೊ. ಈಗ ಸ್ಟ್ಯಾಂಪಿನ ಹೆಚ್ಚುವರಿ ಹಣಕ್ಕಾಗಿ ದೇವರ ಕಡೆ ಕೈ ಚಾಚುತ್ತಿದ್ದೇವೆ.